**ಸಾಕ್ಷಿಯನ್ನು ದಿಃ 12.2.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಪಿ.ಆರ್ ವಕೀಲರಿಂದಃ**

ನಾನು ನನ್ನ ಪರವಾಗಿ ಮತ್ತು ಇತರೆ ಪ್ರತಿವಾದಿಯರ ಪರವಾಗಿ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ. ನನ್ನ ತಂದೆ ಮುತ್ತಾಚಾರಿ ದಿನಾಂಕ 19.7.2010 ರಂದು ತೀರಿಕೊಂಡಿರುತ್ತಾರೆ. ವಾದಿಯರ ತಂದೆ ಪ್ರತಿವಾದಿಯರ ತಂದೆಯ ತಂಗಿಯಾದ ಲಕ್ಷ್ಮಮ್ಮ ಇವರನ್ನು ಮದುವೆ ಆಗಿರುತ್ತಾರೆ ಎಂದರೆ ಸರಿ. ನನ್ನ ಹೆಂಡತಿಯ ಹೆಸರು ಸುಭಾಷಿಣಿ. ನನ್ನ ಅಕ್ಕನ ಹೆಸರು ಮಂಗಮ್ಮ ಉರುಫ್ ಮಹೇಶ್ವರಿ. ನನ್ನ ಅಕ್ಕ ಮಂಗಮ್ಮ ಇವರು ವಾದಿ ನಂಃ4 ರವರನ್ನು ಮದುವೆ ಆಗಿರುತ್ತಾರೆ. ಮದುವೆಯಾದ ನಂತರ ನನ್ನ ಅಕ್ಕ ಗಂಡನ ಮನೆಯಲ್ಲೇ ವಾಸಿಸುತ್ತಿದ್ದಾರೆ.

ದಾವಾ ಜಮೀನಿನ ಸರ್ವೆ ನಂಃ69 ಆಗಿದ್ದು, ಕ್ಷೇತ್ರ 1 ಎಕರೆ 20 ಗುಂಟೆಯಾಗಿರುತ್ತದೆ. ದಾವಾ ಆಸ್ತಿಯನ್ನು ನನ್ನ ತಂದೆಯವರು ಮುನಿಯಪ್ಪ ಬಿನ್ ಕೆಂಪೇಗೌಡ ಇವರ ಕಡೆಯಿಂದ ಖರೀದಿ ಮಾಡಿಕೊಂಡಿರುತ್ತಾರೆ. ಸದರಿಯವರ ಮಧ್ಯದಲ್ಲಿ ಆಗಿರುವ ಕ್ರಯಪತ್ರವನ್ನು ನಾನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಸದರಿಯವರ ಮಧ್ಯದಲ್ಲಿ ಆಗಿರುವ ಕ್ರಯಪತ್ರ ನಿ ಡಿ 1 ಆಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿ ಡಿ 1 ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿ ಅವರ ತಂದೆಯ ಸಹಿಯನ್ನು ಗುರುತಿಸಲು ಹೇಳಲಾಗಿದ್ದು, ಸಾಕ್ಷಿಯು ಸದರಿ ದಾಖಲಾತಿಯ ಪುಟ ನಂಃ1 ರ ಹಿಂಬದಿಯಲ್ಲಿ ತಮ್ಮ ತಂದೆಯವರು ಹಾಕಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಗುರುತಿಸಿರುವ ಸಹಿಯನ್ನು ನಿ ಡಿ 1(ಎ) ಎಂದು ಗುರುತಿಸಲಾಯಿತು. ನಮ್ಮ ತಂದೆಯು ಕನ್ನಡದಲ್ಲಿಯೇ ಸಹಿ ಹಾಕುತ್ತಾರೆ. ಸಾಕ್ಷಿಗೆ ನಿ ಪಿ 2 ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲಾತಿಯನ್ನು ನೋಡಿ ಅದರಲ್ಲಿ ಇರುವ ಸಹಿ ತಮ್ಮ ತಂದೆಯವರದ್ದಾಗಿರುತ್ತದೆ ಎಂದು ನುಡಿದಿದ್ದು ಸಾಕ್ಷಿ ಗುರುತಿಸಿದ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ನಿ ಪಿ 2 ದಾಖಲಾತಿಯು ಕ್ರಯಪತ್ರವಾಗಿದ್ದು, ಸದರಿ ಕ್ರಯಪತ್ರದ ಪ್ರಕಾರ ನನ್ನ ತಂದೆಯು ರಾಮಾಚಾರಿ ಎಂಬುವವರಿಗೆ

ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಹಾಜರು ಪಡಿಸಿರುವ ದಾಖಲಾತಿಗಳ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ನಿ ಪಿ 2 ಆಗುವ ಕಾಲಕ್ಕೆ ನನ್ನ ತಂದೆಯವರು ಕೆಂಪೇಗೌಡ ಇವರ ಕಡೆಯಿಂದ ಆಸ್ತಿಯನ್ನು ಖರೀದಿ ಹಿಡಿಯುವ ಕಾಲಕ್ಕೆ ಆಗಿರುವ ಕ್ರಯಪತ್ರವನ್ನು ರಾಮಾಚಾರಿ ಅವರಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಕೆಂಪೇಗೌಡ ಹಾಗೂ ನನ್ನ ತಂದೆಯ ಮಧ್ಯದಲ್ಲಿ ಆಗಿರುವ ಕ್ರಯಪತ್ರವನ್ನು ನನ್ನ ಅಕ್ಕ ತೆಗೆದುಕೊಂಡು ಬಂದು ನನ್ನ ತಂದೆಗೆ ಕೊಟ್ಟಿದ್ದು ಸದರಿ ಕ್ರಯಪತ್ರದ ಆಧಾರದ ಮೇಲೆ ನನ್ನ ತಂದೆಯವರು ಬ್ಯಾಂಕಿನಿಂದ ಸಾಲವನ್ನು ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಪ್ಯಾರಾ ನಂಃ13 ರಲ್ಲಿ ನಮ್ಮ ತಂದೆಯು ಮಾರಾಟ ಮಾಡಿರುವ ಬಗ್ಗೆ ನಾನು ಅವರನ್ನು ವಿಚಾರಿಸಿರುತ್ತೇನೆ ಅಂತ ನುಡಿದಿದ್ದು, ನನ್ನ ತಂದೆಯವರು ತೀರಿಕೊಳ್ಳುವ 2 ತಿಂಗಳ ಮುಂಚೆ ನಾನು ಸದರಿ ಸಂಗತಿಯ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ಯಾವ ಕಾರಣಕ್ಕಾಗಿ ಸದರಿ ಸಂಗತಿಯ ಬಗ್ಗೆ ನಿಮ್ಮ ತಂದೆಯ ಕಡೆಗೆ ವಿಚಾರಣೆ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪಹಣಿಯು ರಾಮಾಚಾರಿ ರವರ ಹೆಸರಿನಲ್ಲಿ ಬರುತ್ತಿರುವ ಕಾರಣದಿಂದಾಗಿ ನಾನು ನನ್ನ ತಂದೆಯನ್ನು ವಿಚಾರಣೆ ಮಾಡಿದ್ದೇನೆ. ಯಾವ ಆಧಾರದ ಮೇಲೆ ಪಹಣಿ ಪತ್ರಿಕೆಯಲ್ಲಿ ರಾಮಾಚಾರಿ ರವರ ಹೆಸರು ನಮೂದಾಗಿದೆ ಎಂಬುದರ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ಪಹಣಿ ಪತ್ರಿಕೆಯನ್ನು ನೋಡಿದ ನಂತರ ರಾಮಾಚಾರಿ ರವರ ಪರವಾಗಿ ಕ್ರಯಪತ್ರ ಆಗಿರುವ ಸಂಗತಿಯು ನನಗೆ ತಿಳಿದು ಬಂತು ಎಂದರೆ ಸರಿ. 2010 ರ ನಂತರ ನಮ್ಮ ತಂದೆಯು ರಾಮಾಚಾರಿ ರವರ ಪರವಾಗಿ ಕ್ರಯಪತ್ರವನ್ನು ಮಾಡಿರುವುದಿಲ್ಲ ಅಂತ ಹೇಳಿ ದಾವೆಯನ್ನು ಹೂಡಿಲ್ಲ. ಅದೇ ರೀತಿ ರಾಮಾಚಾರಿ ರವರ ವಿರುದ್ಧ ಯಾವುದೇ ದೂರನ್ನು ದಾಖಲಿಸಿಲ್ಲ ಹಾಗೂ ಸದರಿಯವರಿಗೆ ವಕೀಲರ ಮುಖಾಂತರ ಯಾವುದೇ ನೋಟೀಸನ್ನು ಜಾರಿ ಮಾಡಿಲ್ಲ. ರಾಮಾಚಾರಿ ರವರ ಹೆಸರು ಬರುತ್ತಿರುವ ಪಹಣಿ ಪತ್ರಿಕೆಯನ್ನು ಪ್ರಶ್ನಿಸಿ ಕಂದಾಯ ಇಲಾಖೆಯವರ ಮುಂದೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಕೇವಲ

ವಿಚಾರಣೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಯಾರ ಹೆಸರಿನಲ್ಲಿ ಖಾತೆ ಇರುತ್ತದೆಯೋ ಅವರೇ ಕಂದಾಯವನ್ನು ಕಟ್ಟಬೇಕಾಗುತ್ತದೆ ಎಂದರೆ ಸರಿ.

1977 ರ ನಂತರ ನಾನಾಗಲೀ, ನನ್ನ ತಂದೆಯಾಗಲೀ ಕಂದಾಯವನ್ನು ಕಟ್ಟುತ್ತಾ ಬಂದಿರುತ್ತೇವೆ. ಸಾಕ್ಷಿ ಮುಂದುವರೆದು ನಾವು ಸ್ವಾಧೀನಾನುಭವದಲ್ಲಿ ಇರುವವರೆಗೂ ಕಂದಾಯವನ್ನು ಕಟ್ಟುತ್ತಾ ಬಂದಿದ್ದೇವೆ ಎಂದು ನುಡಿಯುತ್ತಾರೆ. ಯಾವ ವರ್ಷದವರೆಗೂ ಕಂದಾಯವನ್ನು ಕಟ್ಟಿರುತ್ತೇವೆ ಎಂದು ನಿರ್ದಿಷ್ಟವಾಗಿ ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆಯು ದಾವಾ ಆಸ್ತಿಯನ್ನು ಕೆಂಪೇಗೌಡ ಇವರ ಕಡೆಯಿಂದ ಖರೀದಿ ಹಿಡಿದ ನಂತರ ವಾದಿಯರ ತಂದೆಯಾದ ರಾಮಾಚಾರಿ ಇವರ ಪರವಾಗಿ ನಿ ಪಿ 2 ರ ಪ್ರಕಾರ 17.3.1977 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಹಿಡಿದ ನಂತರ ರಾಮಾಚಾರಿ ರವರು ಸ್ವಾಧೀನಾನುಭವದಲ್ಲಿದ್ದು ಅವರು ತೀರಿಕೊಂಡ ನಂತರ ವಾದಿಯರು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

1977 ನಂತರ ಯಾವ ಕಾಲಕ್ಕೂ ನಾವಾಗಲಿ, ನಮ್ಮ ತಂದೆಯಾಗಲೀ ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿ ಡಿ 1 ದಾಖಲಾತಿಯನ್ನು ನನ್ನ ಅಕ್ಕನಾದ ಮಂಗಮ್ಮ ಇವರು ತೆಗೆದುಕೊಂಡು ಬಂದು ನಮ್ಮ ತಂದೆಯವರಿಗೆ ಕೊಟ್ಟಿರುವಂತಹ ದಾಖಲಾತಿ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಎಲ್ಲಾ ದಾಖಲಾತಿಗಳು ನಮ್ಮ ಪ್ರತಿವಾದ ಪತ್ರಕ್ಕೆ ಅನುಗುಣವಾಗಿ ನಾವೇ ಸೃಷ್ಟಿ ಮಾಡಿ ಹಾಜರು ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು 1995 ರಲ್ಲಿ ಬೋರ್ ವೆಲ್ ಹಾಕಿರುತ್ತೇವೆ. ಸದರಿ ಸಂಗತಿಯನ್ನು ಸಾಬೀತು ಪಡಿಸಲು ನನ್ನ ಬಳಿ ದಾಖಲಾತಿಗಳಿವೆ. ವಾದಿಯರು ಬೋರ್ ವೆಲ್ ಹಾಕಿ ಅವರೇ ಸ್ವಾಧೀನಾನುಭವದಲ್ಲಿ ಇದ್ದರೂ ಕೂಡಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಸಂಬಂಧಪಟ್ಟ ಆಸ್ತಿಯನ್ನು ಪಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ಸುಳ್ಳು ಪ್ರತಿವಾದಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಸುಕೀತಾ ಎಸ್ ಹದ್ಲಿ)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ